ರೇಷ್ಮೆ ಗೂಡಿನ ಮಾರುಕಟ್ಟೆ

86(67) ಶ್ರೀ ರಾಜು ಕೆ. (ಮದ್ದೂರು) ಮಾನ್ಯ ಕಾರ್ಮಿಕ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು;

ಇ) ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಮಾರುಕಟ್ಟೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ರೇಷ್ಮೆ ತಳಿಯು ಬಹಳ ವರ್ಷಗಳಿಂದ ಹಳೆಯದಾಗಿದ್ದು, ಗೂಡಿನ ರೆಂಡಿಟಾ ಮತ್ತು ಗುಣಮಟ್ಟವು ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಹೊಸ ತಳಿಯನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಋ) ಹಾಗಿದ್ದಲ್ಲಿ, ಹೊಸ ತಳಿಯನ್ನು ಯಾವಾಗ ಅಭಿವೃದ್ಧಿ ಪಡಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಅ) ರಾಜ್ಯದ ಮಾರುಕಟ್ಟೆಗಳಲ್ಲಿ ವಹಿವಾಟು ಆಗುವ ರೇಷ್ಮೆ ಗೂಡುಗಳಲ್ಲಿ ಶೇಕಡ 23.5 ಭಾಗ ರಾಮನಗರದ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ವಹಿವಾಟು ಆಗುತ್ತಿದೆ. ರಾಮನಗರ ಸೇರಿದಂತೆ ಎಲ್ಲಾ ಪ್ರಮುಖ ಮಾರುಕಟ್ಟೆಗಳನ್ನು ಮೇಲ್ದರ್ಜೆಗೆ ಏರಿಸಲು ಕ್ರಮ ವಹಿಸಲಾಗುತ್ತಿದೆ.

ಆ) ಹಾಲಿ ಇರುವ ಕಟ್ಟಡಗಳಲ್ಲದೆ ಆರ್.ಐ.ಡಿ.ಎಫ್. ಯೋಜನೆಯಡಿ ಹೆಚ್ಚುವರಿ ಪ್ರಾಂಗಣ ನಿರ್ಮಿಸಲು ಕ್ರಮ ವಹಿಸಲಾಗಿದೆ. ಮಾರುಕಟ್ಟೆಯ ಪಕ್ಕದಲ್ಲಿ 3.11 ಎಕರೆ ಜಮೀನು ಸ್ವಾಧೀನ ಕಾರ್ಯಪೂರ್ಣವಾದ ನಂತರ ಆಧುನಿಕ ಸೌಲಭ್ಯಗಳಿರುವ ಮಾರುಕಟ್ಟೆ ನಿರ್ಮಾಣ ಮಾಡಲಾಗುವುದು.

ಇ) ಇಲ್ಲ. ರೇಷ್ಮೆ ಬೆಳೆಗಾರರು ತಂಗಾಲು ರೇಷ್ಮೆ ಭವನ, ಮಹಿಳಾ ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ಆಕ್ವಾ ಗಾರ್ಡ್‌ಗಳು, ನಿಖರವಾದ ತೂಕಕ್ಕಾಗಿ ಎಲೆಕ್ಟ್ರಾನಿಕ್ ತೂಕದ ಯಂತ್ರಗಳು, ಗೂಡುಗಳನ್ನು ಹರಡಲು ಕಬ್ಬಿಣದ ಜಾಲರಿಗಳು, ತೂಕ ಮಾಡಲು ಪ್ಲಾಸ್ಟಿಕ್ ಬುಟ್ಟಿ/ಕ್ರೇಟ್‌ಗಳು, ಗೂಡು ಸಾಗಿಸಲು ಟ್ರಾಲಿಗಳು ಹಾಗೂ ರೈತರಿಗೆ ಮತ್ತು ರೀಲರುಗಳಿಗೆ ಕುಳಿತುಕೊಳ್ಳಲು ಆಸನಗಳನ್ನು ಒದಗಿಸಲಾಗಿದೆ. ಶೀಘ್ರ ಗೂಡಿನ ವಹಿವಾಟಿಗೆ ಗಣಕೀಕರಣ ಹಾಗೂ ವಹಿವಾಟಿನಲ್ಲಿ ಪಾರದರ್ಶಕತೆ ತರಲು ಸಿಸಿಟಿವಿ ಅಳವಡಿಸಲಾಗಿದೆ.

ಈ) ಹಾಲಿ ಇರುವ ಕಟ್ಟಡಗಳಲ್ಲದೆ ಆರ್.ಐ.ಡಿ.ಎಫ್. ಯೋಜನೆಯಡಿ ಹೆಚ್ಚುವರಿ ಪ್ರಾಂಗಣ ನಿರ್ಮಿಸಲು ಕ್ರಮ ವಹಿಸಲಾಗಿದೆ. ಮಾರುಕಟ್ಟೆಯ ಪಕ್ಕದಲ್ಲಿ 3.11 ಎಕರೆ ಜಮೀನು ಸ್ವಾಧೀನ ಕಾರ್ಯ ಪೂರ್ಣವಾದ ನಂತರ ಆಧುನಿಕ ಸೌಲಭ್ಯಗಳಿರುವ ಮಾರುಕಟ್ಟೆ ನಿರ್ಮಾಣ ಮಾಡಲಾಗುವುದು.

ಉ) ಇಲ್ಲ. ಹಿಂದೆ ಬಳಕೆಯಲ್ಲಿದ್ದ ಮಿಶ್ರಣ ಮೈಸೂರು ಬದಲು 2003–04ನೇ ಸಾಲಿನಿಂದ ಮೈಸೂರು (ಕೋಲಾರ ಗೋಲ್ಡ್) ಚಾಲ್ತಿಯಲ್ಲಿದೆ. 2002–03ರಲ್ಲಿದ್ದ ರೆಂಡಿಟ್ಟಾ 8.3, 2003–04ನೇ ಸಾಲಿಗೆ 7.5 ಮತ್ತು 2009–10 ಸಾಲಿಗೆ 7.37ಕ್ಕೆ ಸುಧಾರಣೆಯಾಗಿದೆ.

ಊ) ತಳಿಗಳ ಶುದ್ಧತೆ ಗುಣಮಟ್ಟ ಮತ್ತು ರೋಗ ಮುಕ್ತತೆ ಕಾಪಾಡಲು ಪಿ4, ಪಿ3, ಪಿ2 ಮತ್ತು ಪಿ1 ಹಂತಗಳ ಏಕಮುಖದ ವೈಜ್ಞಾನಿಕ ಸಾಕಾಣಿಕೆಯನ್ನು ಕ್ರಮಬದ್ಧವಾಗಿ ಪರಿಪಾಲಿಸಲಾಗುತ್ತಿದೆ. ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಎನ್‌ಪಿ2, ಕೆಎಸ್‌ಓ1, ಬಿಆರ್‌ಓ2, ಎನ್‌ಪಿ4, ಎಚ್‌ಎನ್‌ಡಿ ಮತ್ತು ಕೆಎಸ್ 10 ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಈ ತಳಿಗಳ ಕ್ಷೇತ್ರ ಮಟ್ಟದ ಪರೀಕ್ಷೆ ನಡೆಸಲಾಗುತ್ತಿದೆ.

ಋ) ಅಭಿವೃದ್ಧಿಪಡಿಸಿದ ತಳಿಗಳ ಕ್ಷೇತ್ರ ಮಟ್ಟದ ಪರೀಕ್ಷೆ ನಡೆಸಿ ಸೂಕ್ತವಾದಲ್ಲಿ ತಳಿ ಅಧಿಕರಣದ ನಂತರ ರೈತರ ಬಳಕೆಗೆ ಬಿಡುಗಡೆ ಮಾಡಲಾಗುವುದು.